## ಅಂಗೈಯಲ್ಲಿ ಅರಮನೆ

### ವೇದಿಕೆಯಲ್ಲಿ ಹಾವು

ಇತ್ತೀಚೆಗೆ ಮಲೆನಾಡಿನ ಮನೆಯೊಂದರ ಹೊರಗೆ ಧೋ ಎಂದು ಸುರಿಯುವ ಮಳೆ. ಒಳಗೆ ರಾಮಾಯಣದ ಪಾದುಕಾ ಪ್ರದಾನ ಪ್ರಸಂಗದ ತಾಳಮದ್ದಲೆ. ವನವಾಸಕ್ಕೆ ತೆರಳಿದ ರಾಮ ಚಿತ್ರ ಕೂಟದಲ್ಲಿದ್ದಾಗ ಅಯೋಧ್ಯೆಯ ಪಟ್ಟವನ್ನೇರಲು ಒಪ್ಪದ ಭರತ ರಾಮನನ್ನು ಅಯೋಧ್ಯೆಗೆ ವಾಪಸ್ ಆಗುವಂತೆ ಬೇಡುವ ಸನ್ನಿವೇಶ. ಅದೇ ಸಮಯಕ್ಕೆ ವೇದಿಕೆಯಲ್ಲಿ ರಾಮನ ಪಾತ್ರಧಾರಿಯ ಪಕ್ಕ ಸಣ್ಣ ಹಾವೊಂದು ಎದುರಿಗೆ ಕುಳಿತ ಭರತ ಪಾತ್ರಧಾರಿಗೆ ಕಾಣಿಸಿತು. ಅಲ್ಲಿ ಹಾವಿದೆ ಎಂದು ಸಂಘಟಕರಿಗೆ ಕೈಸನ್ನೆ ಮೂಲಕ ತಿಳಿಸಿ, ಹಾವಿನತ್ತ ಕೈ ತೋರಿಸಿ 'ಅಣ್ಣಾ ರಾಮಾ, ಈ ಕಾನನದಲ್ಲಿ ಇಂತಹ ಹಾವು, ಕ್ರೂರಮೃಗಗಳ ಮಧ್ಯೆ ನೀನು ವಾಸ ಮಾಡುವುದು ಬೇಡ. ಅಯೋಧ್ಯೆಗೆ ವಾಪಸ್ ಆಗಿ ರಾಜ್ಯಭಾರ ಮಾಡು' ಎಂದು ಪರಿಪರಿಯಾಗಿ ಬೇಡಿದ. ಮಾತು ಸಾಂದರ್ಭಿಕವಾಗಿದ್ದರೂ, ಪ್ರಕರಣ ಸುರಳೀತವಾದ ಮೇಲೆಯೆ ಎಲ್ಲರೂ ನಕ್ಕಿದ್ದು.

**ಜಯಪ್ರಕಾಶ ತಲವಾಟ, ಸಾಗರ**






### ಸಾಕೇತನ ಸಖತ್ ಮಾತು

ಸಂಕ್ರಾಂತಿಗೆ ಸಂಬಂಧಿಕರೆಲ್ಲ ಸೇರಿ ಅಣ್ಣನ ಫಾರ್ಮ್ ಹೌಸಿಗೆ ಹೋಗಿದ್ದಾರೆ. ನನ್ನ ಮೊಮ್ಮಗ ಸಾಕೇತ ಮೂರೂವರೆ ವರ್ಷದವನು. ತುಂಬಾ ತರಲೆ, ತುಂಟ. ಮಾತನಾಡಲು ಆಗ ಕಲಿತಿದ್ದ. ಅವನ ತುಂಟಾಟಕ್ಕೆ ಬೇಸತ್ತು ಅವನ ಅಪ್ಪ ಗದರಿದ್ದಾನೆ. ಎಲ್ಲರ ಮುಂದೆ ಅಪ್ಪ ಬೈದಿದ್ದಕ್ಕೆ ಅವಮಾನದಿಂದ ತಲೆ ತಗ್ಗಿಸಿಕೊಂಡು, ಮುಖ ಊದಿಸಿ ತೋಟದ ಮಾಲಿಯ ಮನೆಗೆ ಹೋಗಿ 'ನಮ್ಮಪ್ಪ ನನಗೆ ಬೈತಾರೆ. ನಾನು ನಿಮ್ಮ ಮನೆಯಲ್ಲಿ ಇರ್ತೀನಿ, ನನ್ನನ್ನು ನೋಡ್ಕೋತೀರಾ' ಅಂತ ಕೇಳಿದ್ದಾನೆ. ಇದನ್ನು ಆ ಮಾಲಿಯ ಹೆಂಡತಿ ಎಲ್ಲರ ಮುಂದೆ ಹೇಳಿದಾಗ ಎಲ್ಲರೂ ಬಿದ್ದು ಬಿದ್ದು ನಕ್ಕಿದ್ದರಂತೆ.

**ಪುಷ್ಪಾ ಹಾಲಭಾವಿ, ಧಾರವಾಡ**